ಸಾಕ್ಷಿಯನ್ನು ಈ ದಿನಾಂಕ 14.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ. ಜಿ.ಯು.ಕೆ ವಕೀಲರಿಂದ :**

1. ನನ್ನ ತಂದೆ ದಿ:24.01.1990 ರಲ್ಲಿ ಪವತಿ ಆಗಿರುತ್ತಾರೆ. ನನ್ನ ತಂದೆಗೆ ಮೂರು ಜನ ಸಹೋದರರು ಮತ್ತು ಇಬ್ಬರು ಸಹೋದರಿಯರು ಇದ್ದರು. ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನನ್ನ ತಂದೆ ಮತ್ತು ಆತನ ಸಹೋದರ ಸಹೋದರಿಯರ ನಡುವೆ ಯಾವುದೇ ವಿಭಾಗ ಆಗಿರಲಿಲ್ಲ. ಸರ್ವೆ ನಂ. 282/1 ರ ಸ್ವತ್ತು ಮೂಲತಃ ನನ್ನ ತಾತನಿಗೆ ಸೇರಿದ ಸ್ವತ್ತಾಗಿದ್ದು, ನನ್ನ ತಾತ 1992-93 ರ ಸಾಲಿನಲ್ಲಿ ಪವತಿ ಆಗಿದ್ದು, ಆ ಸಮಯದಲ್ಲಿ ನನ್ನ ತಂದೆಯು ಸಹ ಪವತಿ ಆಗಿದ್ದ ಕಾರಣ ಗ್ರಾಮಸ್ಥರು ಸದರಿ ಸ್ವತ್ತನ್ನು ಭಾಗ ಮಾಡಿ, ಸ್ವತ್ತಿನ ಖಾತೆಯನ್ನು ನನ್ನ ತಾಯಿಯ ಹೆಸರಿಗೆ ವರ್ಗಾಹಿಸಿರುತ್ತಾರೆ. ಸರ್ವೆ ನಂ. 282/1 ರ ಸ್ವತ್ತು ನನ್ನ ತಂದೆಯ ತಂದೆ ಕಡೆಯಿಂದ ಬಂದ ಸ್ವತ್ತಾಗಿದ್ದು, ನನ್ನ ತಾಯಿಯ ತಂದೆ ಕಡೆಯಿಂದ ಬಂದ ಸ್ವತ್ತಾಗಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಕಡೆಯಿಂದ ಬೇರೆ ಯಾವುದೇ ಸ್ವತ್ತುಗಳು ಬಂದಿರುವುದಿಲ್ಲ. ಸಾಕ್ಷಿಯು ಮುಂದುವರೆದು, ನನ್ನ ತಂದೆಯ ತಂದೆ ಕಡೆಯಿಂದ ನೇರವಾಗಿ ನನ್ನ ತಾಯಿಗೆ ಹೆಸರಿಗೆ ಸ್ವತ್ತುಗಳು ಬಂದಿರುತ್ತದೆ. ಸದರಿ ಸ್ವತ್ತುಗಳು ನನ್ನ ತಾಯಿಗೆ ವಿಭಾಗದ ಮೂಲದ ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಮಕ್ಕಳಿದ್ದು, ಅವರೆಂದರೆ ನಾನು ಹಾಗೂ ನನ್ನ ತಂಗಿ ವೀಣಾ ಆಗಿರುತ್ತಾರೆ.

2. ನನ್ನ ಮದುವೆ ಆಗಿ 16 ವರ್ಷಗಳಾಗಿರುತ್ತದೆ. ಈ ದಾವೆಯ 1ನೇ ವಾದಿ ನನ್ನ ಹೆಂಡತಿ ಎಂದರೆ ಸರಿ. 2ನೇ ವಾದಿ ನನ್ನ ಮಗನಾಗಿದ್ದು, ಆತ ಅಪ್ರಾಪ್ತ ವಯಸ್ಕನಾಗಿರುತ್ತಾನೆ ಎಂದರೆ ಸರಿ. ದಾವಾ ಸ್ವತ್ತನ್ನು ಹೊರತುಪಡಿಸಿ ನಾನು ಕೆಲವು ಸ್ವತ್ತುಗಳನ್ನು ಸ್ವಯಾರ್ಜಿತ ವಾಗಿ ಸಂಪಾದಿಸಿರುತ್ತೇನೆ ಎಂದರೆ ಸರಿ. ನನ್ನ ತಾಯಿಗೆ ಆಕೆಯ ತಂದೆಯ ಕಡೆಯಿಂದ ಕೆಲವು ಸ್ವತ್ತುಗಳು ಬಂದಿರುತ್ತವೆ ಎಂದರೆ ಸರಿಯಲ್ಲ. ನನ್ನ ತಾಯಿ ಎಲ್ಲಿಯೂ ಕೆಲಸ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಅತ್ತಿಬೆಲೆಯಲ್ಲಿರುವ ಮನೆಯನ್ನು ನನ್ನ ತಂದೆಯ ಮರಣದ

ನಂತರ ಬಂದಂತಹ ಹಣದಿಂದ ಖರೀದಿ ಮಾಡಿದಂತಹ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ.

3. ನನ್ನ ತಂದೆ ಸರ್ಕಾರಿ ಶಿಕ್ಷಕರಾಗಿದ್ದು, ಅವರ ಮರಣದ ನಂತರ ಬಂದಂತಹ ಹಣದಲ್ಲಿ ಸದರಿ ಮನೆಯನ್ನು ಖರೀದಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಅವರ ಮರಣದ ನಂತರ ನನ್ನ ತಾಯಿಗೆ ಪಿಂಚಣಿ ಮಾತ್ರ ಬರುತ್ತಿರುತ್ತದೆ ಎಂದು ನುಡಿಯುತ್ತಾರೆ. ಅತ್ತಿಬೆಲೆಯಲ್ಲಿರುವ ಮನೆಯನ್ನು ನನ್ನ ತಾಯಿ ಬಟ್ಟೆ ಹೊಲಿದು ಬಂದಂತಹ ಹಣ ಮತ್ತು ಪಿಂಚಣಿ ಹಣವನ್ನು ಒಟ್ಟುಗೂಡಿಸಿ ಖರೀದಿ ಮಾಡಿದ ಮನೆಯಾಗಿರುತ್ತದೆ. ಸದರಿ ಪಿಂಚಣಿ ಹಣವು ನನ್ನ ತಂದೆಯ ಮರಣದ ನಂತರ ನನ್ನ ತಾಯಿಯ ಹೆಸರಿಗೆ ಬರುತ್ತಿರುವ ಹಣವಾಗಿರುತ್ತದೆ ಎಂದರೆ ಸರಿ. ಅತ್ತಿಬೆಲೆಯಲ್ಲಿರುವ ಮನೆಯ ದಾಖಲಾತಿಗಳನ್ನು ನನಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ವಾದಿಯು ಕದ್ದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ದಾಖಲೆಯನ್ನು ಕಳ್ಳತನ ಮಾಡಿಲ್ಲದೇ ಇದ್ದರೂ ಸಹ ನಾನು ಈ ದಿನ ನಾನು ನ್ಯಾಯಾಲಯದಲ್ಲಿ ಸುಳ್ಳೂ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನಾನು ಈ ಬಗ್ಗೆ ದೂರನ್ನು ದಾಖಲಿಸಿದ್ದರೂ ಪೋಲಿಸರು ಒತ್ತಡ ಹೇರಿ, ದೂರನ್ನು ಮರಳಿ ಪಡೆಯುವಂತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪೋಲಿಸರು ನನ್ನ ಮೇಲೆ ಯಾವುದೇ ಒತ್ತಡ ಹೇರಿಲ್ಲದೇ ಇದ್ದರೂ ನಾನು ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಅತ್ತಿಬೆಲೆಯಲ್ಲಿರುವ ಮನೆಯನ್ನು 1994 ರಲ್ಲಿ ಖರೀದಿ ಮಾಡಲಾಗಿರುತ್ತದೆ. ಸದರಿ ಮನೆಯಲ್ಲಿ ನಾನು ಈಗ ವಾಸಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಬೇರೆಯವರಿಗೆ ಭೋಗ್ಯಕೆಂದು ಕೊಟ್ಟಿರುತ್ತೇನೆ. ನಾನು ಸದರಿ ಮನೆಯನ್ನು ಬಾಡಿಗೆ ಕೊಟ್ಟಿದ್ದ, ನನಗೆ ಪ್ರತಿ ತಿಂಗಳು ಬಾಡಿಗೆ ಬರುತ್ತಿದ್ದರೂ, ಭೋಗ್ಯಕ್ಕೆ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇಂಜಿನಿಯರಿಂಗ್

ಪದವಿಧರನಾಗಿರುತ್ತೇನೆ. ನನ್ನ ತಂಗಿ ಎಂ.ಎಸ್ಸಿ.ಸಿ ಪದವಿಧರರಾಗಿರುತ್ತಾರೆ. ನಾನು 25 ವರ್ಷಗಳಿಂದ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಕೆಲಸಕ್ಕೆ ಹೋಗಲು ಪ್ರಾರಂಭ ಮಾಡಿದ ನಂತರ ನಮ್ಮ ಕುಟುಂಬಕ್ಕೆ ಯಾವುದೇ ಆರ್ಥಿಕವಾಗಿ ತೊಂದರೆ ಆಗಿರುವುದಿಲ್ಲ ಎಂದರೆ ಸರಿ. ನಾನು ಈಗ Panasonic Avenics Corporation ಕೆಲಸ ಮಾಡುತ್ತಿದ್ದು, ನನಗೆ ವಾರ್ಷಿಕವಾಗಿ ನಿವ್ವಳ ರೂ.1 ಕೋಟಿ ಆದಾಯ ಇರುತ್ತದೆ. 2013 ರಿಂದ ನಾನು ವಾದಿಯರ ಆಸ್ಪತ್ರೆ ಮತ್ತು ಅವರ ಸಾಲ ಮತ್ತು ಇತರೆ ಖರ್ಚುಗಳನ್ನು ನೋಡಿಕೊಳ್ಳುವ ಸಮಸ್ಯೆ ಬಂದಿರುವುದಿಲ್ಲ ಎಂದರೆ ಆ ರೀತಿ ಸಮಸ್ಯೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ನೆಲಮಂಗಲ